**ಕರ್ನಾಟಕ ಸರ್ಕಾರ**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ.ಡಿಟಿಇ/02/ಆರ್‌ಇಸಿ/2019-20

ಆಯುಕ್ತರವರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಭವನ, ಅರಮನೆ ರಸ್ತೆ
ಬೆಂಗಳೂರು-560 001
ದಿನಾಂಕ:- 01-09-2020.

-:: **ನೆನಪೋಲೆ** ::-

**ವಿಷಯ:** ಸಂಸ್ಥೆಯಖರ್ಚು-ವೆಚ್ಚ ಹಾಗೂ ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗೂ ನಿಗದಿತ ಅವಧಿಯೊಳಗೆ ಗೂಗಲ್ ಫಾರ್ಮ್ ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಬಗ್ಗೆ.

**ಉಲ್ಲೇಖ:**
1. ನಿರ್ದೇಶನಾಲಯದ ಸುತ್ತೋಲೆ ಪತ್ರ ಸಂಖ್ಯೆ: ಡಿಟಿಇ 02 ಆರ್‌ಇಸಿ 2019-20 ದಿ: 30-06-2020
2. ಮಹಾಲೇಖಪಾಲರ ಅ.ಸ.ಪ.ಸಂ: AG(A&E)/VLCIX/ Reconcilation/2018-19/ 273 ದಿ: 06.03.2020
3. ಆರ್ಥಿಕ ಇಲಾಖೆಯ ಸುತ್ತೋಲೆ ಸಂ: ಆಇ 02 ಟಿಎಆರ್ 2020, ದಿ: 16.06.2020

-00000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಸರ್ಕಾರದ ಆದೇಶದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾಸಂಸ್ಥೆಗಳ ಖರ್ಚು-ವೆಚ್ಚಗಳನ್ನು ಕಡ್ಡಾಯವಾಗಿ ಖಜಾನೆ-2 ಮಾದರಿಯಲ್ಲಿಯೆ ಮಾಡಲು ಸೂಚಿಸಲಾಗಿರುವುದರಿಂದ ಆಯಾ ಸಂಸ್ಥೆಯ ಖರ್ಚು-ವೆಚ್ಚಗಳಿಗೆ ಸಂಬಂಧಿಸಿದ **ಖಜಾನೆ ನಮೂನೆ 62-ಬಿ** ಸದರಿ ಸಂಸ್ಥೆಗಳಲ್ಲಿ ಲಭ್ಯವಾಗುತ್ತದೆ. ಆದಕಾರಣದಿಂದ ಇನ್ನು ಮುಂದೆ ಪ್ರತಿ ತಿಂಗಳ ಖರ್ಚು-ವೆಚ್ಚಗಳ ಅಂಕಿ-ಅಂಶಗಳನ್ನು ಆಯಾ ಸಂಸ್ಥೆಯಲ್ಲಿನ ಲೆಕ್ಕ-ಪತ್ರಗಳೊಂದಿಗೆ ತಾಳೆ ಮಾಡಿ ಹೊಂದಾಣಿಕೆಯಾದಲ್ಲಿ ನಿಗಧಿತ ಅವಧಿಯೊಳಗೆ ಆಯುಕ್ತರ ಕಛೇರಿಗೆ ಸಲ್ಲಿಸುವುದು. ತಾಳೆಯಾಗದಿದ್ದಲ್ಲಿ ಸಂಬಂಧಪಟ್ಟ ಸ್ಥಳೀಯ ಖಜಾನೆಯೊಂದಿಗೆ ಸಮನ್ವಯಿಸಿ ಅಂಕಿ ಅಂಶಗಳನ್ನು ತಾಳೆಮಾಡಿ, ಹೊಂದಾಣಿಸಿ ಸಂಸ್ಥೆಯ ಬಟವಾಡೆ ಅಧಿಕಾರಿಯವರಿಂದ ದೃಢೀಕರಿಸಿ ಆಯುಕ್ತರ ಕಛೇರಿಗೆ ಯಾವುದೇ ವಿಳಂಬಕ್ಕೆ ಅವಕಾಶ ಕೊಡದೆ ಸಂಬಂಧಿಸಿದ ಸೂಕ್ತ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸುವುದು ಎಂದು ಸೂಚಿಸಲಾಗಿತ್ತು. ಅದರಂತೆ ಹಲವಾರು ಸಂಸ್ಥೆಯವರು ಕಳುಹಿಸಿರುವ ಮಾಹಿತಿಯು ಅಪೂರ್ಣವಾಗಿರುವುದರಿಂದ ಸಂಸ್ಥೆವಾರು ಮಾಹಿತಿಗೂ ಮಹಾಲೇಖಪಾಲರ ಲೆಕ್ಕ-ಪತ್ರಗಳಿಗೂ ತಾಳೆಯಾಗುತ್ತಿರುವುದಿಲ್ಲ.

ಮುಂದುವರೆದು, ಉಲ್ಲೇಖ(2)ರ ಮಹಾಲೇಖಪಾಲರ ಪತ್ರದಲ್ಲಿ **ಸೆಪ್ಟಂಬರ್-2019 ರಿಂದ ಮಾರ್ಚ್-2020** ಅಂತ್ಯದವರೆಗೆ ಲೆಕ್ಕ ಸಮನ್ವಯ ಮಾಹಿತಿಯನ್ನು ಜರೂರಾಗಿ ಸಲ್ಲಿಸಲು ಸೂಚಿಸಲಾಗಿರುತ್ತದೆ, ಉಲ್ಲೇಖ (3)ರ ಆರ್ಥಿಕ ಇಲಾಖೆಯ ಸುತ್ತೋಲೆಯಲ್ಲಿಯೂ ಲೆಕ್ಕ ಸಮನ್ವಯಿಸದ ಬಗ್ಗೆ ಗಂಭೀರವಾಗಿ ತಿಳಿಯಪಡಿಸಿರುವುದರಿಂದ ಎಲ್ಲಾ ಸಂಸ್ಥೆಗಳ ಪ್ರಾಂಶುಪಾಲರು ಆದ್ಯತೆ ಮೇರೆಗೆ ಕೂಡಲೇ ಸೆಪ್ಟಂಬರ್-2019 ರಿಂದ ಮಾರ್ಚ್ 2020ರ ವರೆಗಿನ ಲೆಕ್ಕ ಸಮನ್ವಯವನ್ನು ಮಾಡಿ ಯಾವುದಾದಾರೂ ಪ್ರತಿಕೂಲ ಟೀಕೆಗಳು ಕಂಡುಬಂದಲ್ಲಿ ಉಲ್ಲೇಖಿತ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಕ್ರಮವಹಿಸಿ ದಿ: 04-09-2020 ರೊಳಗೆ ಆಯುಕ್ತರ ಕಛೇರಿಗೆ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದೆ. ತಡವಾದಲ್ಲಿ ಮುಂದಿನ ಆಗು-ಹೋಗುಗಳಿಗೆ ಸಂಸ್ಥೆಯ ಪ್ರಾಂಶುಪಾಲರನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸೂಚಿಸಿದೆ.

**ಎಲ್ಲಾ ಸಂಸ್ಥೆಗಳಲ್ಲೂ ಮೇಲ್ಕಂಡ ಮಾಹೆಗಳಲ್ಲಿ ಲೆಕ್ಕ ಸಮನ್ವಯ ಮಾಡಿರುವ ಮಾಹಿತಿಯನ್ನು ಈ ಕೆಳಕಂಡ ಗೂಗಲ್ ಫಾರ್ಮ್‌ವಿಳಾಸ:** https://forms.gle/TiL6GVp23VeptGqf9 **ದಲ್ಲಿ ಭರ್ತಿಮಾಡಿ ಹಾಗೂ ಮಾಹೆವಾರು ಲೆಕ್ಕ-ಪತ್ರಗಳ ಪ್ರತಿಗಳನ್ನು ಆಯುಕ್ತರ ಕಛೇರಿಗೆ ಅತೀ-ಜರೂರಾಗಿ ಕಳುಹಿಸಲು ತಿಳಿಸಿದೆ.**

01/09/2020

**ಲೆಕ್ಕಾಧಿಕಾರಿಗಳು(ಬಿಲ್ಸ್)**

**ಇವರಿಗೆ;**

ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರಿಗೆ - ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಇ-ಆಡಳಿತ ವಿಭಾಗ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಭವನ, ಬೆಂಗಳೂರು (**ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು**)
2. ಕಛೇರಿ ಪ್ರತಿ.